**All India Radio: Bangalore**
**National Bulletin In Kannada**
**31.08.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.08.2026 1.10 pm**

**<>><><*><><<>**

ಮುಖ್ಯಾಂಶಗಳು

**೧.** **ಕಿರ್ಗಿಸ್ತಾನ್‌ನಲ್ಲಿ ಭಾರತದೊಂದಿಗೆ ತೊಡಗಿಸಿಕೊಂಡಿರುವ ೪ ನಿಯೋಗಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ**

**೨.** **ಮುಂಬೈನಲ್ಲಿ ಅತ್ಯಾಧುನಿಕ ಡೈವಿಂಗ್ ಬೆಂಬಲ ನೌಕೆ-ಐಎನ್‌ಎಸ್ ನಿಪುಣ್ ನೌಕಾಪಡೆಗೆ ಸೇರ್ಪಡೆ**

**೩.** **ಪೆಟ್ರೋಲ್‌ನಲ್ಲಿ ಎಥನಾಲ್ ಪ್ರಮಾಣ ಬಹಿರಂಗಪಡಿಸಲು ಕೋರಿದ್ದ ಪಿಐಎಲ್ ಅರ್ಜಿ ವಜಾಗೊಳಿಸಿದ ಸುಪ್ರೀಂಕೋರ್ಟ್**

**೪.** **೨೦೩೦ರ ವೇಳೆಗೆ ಭಾರತ-ಬ್ರೆಜಿಲ್ ದ್ವಿಪಕ್ಷೀಯ ವ್ಯಾಪಾರ ೩೦ ಶತಕೋಟಿ ಡಾಲರ್‌ಗೆ ಹೆಚ್ಚಿಸುವ ಜಂಟಿ ಗುರಿ**

**೫.** **ಯುಎಸ್-ಓಪನ್ ಟೆನಿಸ್ ; ಮೊದಲ ಸುತ್ತಿನಲ್ಲೇ ಸರ್ಬಿಯಾದ ನೊವಾಕ್ ಜೊಕೊವಿಚ್‌ಗೆ ಆಘಾತಕಾರಿ ಸೋಲು**

**<>><><*><><<>**

ಎರಡು ದಿನಗಳ ಪ್ರವಾಸಕ್ಕಾಗಿ ಕಿರ್ಗಿಸ್ತಾನ್‌ಗೆ ಭೇಟಿ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬಿಷ್ಕೆಕ್‌ನಲ್ಲಿಂದು 'ಫ್ರೆಂಡ್ಸ್ ಆಫ್ ಇಂಡಿಯಾ' ಕಾರ್ಯಕ್ರಮದಡಿ ವಿವಿಧ ಕ್ಷೇತ್ರಗಳಲ್ಲಿ ಭಾರತದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಯೋಗ ಹಾಗೂ ಮಾನಸ್ ಅಕಾಡೆಮಿ ಸೇರಿದಂತೆ ನಾಲ್ಕು ಪ್ರಮುಖ ನಿಯೋಗಗಳೊಂದಿಗೆ ಸೌಹಾರ್ದಯುತ ಸಂವಾದ ನಡೆಸಿದರು. ನಂತರ, ಬಿಷ್ಕೆಕ್‌ನ ಮಹಾತ್ಮ ಗಾಂಧಿ ಸ್ಮಾರಕ ಉದ್ಯಾನವನಕ್ಕೆ ಭೇಟಿ ನೀಡಿದ ಪ್ರಧಾನಿಯವರು, ಅಲ್ಲಿ ಸ್ಥಾಪಿಸಲಾಗಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ತಮ್ಮ ಪ್ರವಾಸದ ಮೊದಲ ದಿನವಾದ ಇಂದು ಪ್ರಧಾನಿ ಮೋದಿ ಅವರು ಶಾಂಘೈ ಸಹಕಾರ ಸಂಘಟನೆ-ಎಸ್‌ಸಿಒ ಪ್ರಮುಖ ಸದಸ್ಯ ರಾಷ್ಟ್ರಗಳ ನಾಯಕರೊಂದಿಗೆ ಸರಣಿ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಈ ವೇಳೆ ರಷ್ಯಾ, ಇರಾನ್, ಕಿರ್ಗಿಸ್ತಾನ್ ಹಾಗೂ ಅರ್ಮೇನಿಯಾ ದೇಶಗಳ ರಾಷ್ಟ್ರೀಯ ಮುಖ್ಯಸ್ಥರೊಂದಿಗೆ ಪ್ರತ್ಯೇಕ ಮಾತುಕತೆ ನಡೆಸಲಿದ್ದಾರೆ. ನಾಳೆ ತಮ್ಮ ಭೇಟಿಯ ಎರಡನೇ ಹಾಗೂ ಕೊನೆಯ ದಿನದಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶಾಂಘೈ ಸಹಕಾರ ಸಂಘಟನೆಯ ೨೫ನೇ ಶೃಂಗಸಭೆಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

**<>><><*><><<>**

ಭಾರತೀಯ ನೌಕಾಪಡೆಯು ನಿಸ್ತಾರ್ ವರ್ಗಕ್ಕೆ ಸೇರಿದ ತನ್ನ ಎರಡನೇ ಡೈವಿಂಗ್ ಬೆಂಬಲ ನೌಕೆ ಡಿಎಸ್‌ವಿ ಐಎನ್‌ಎಸ್-ನಿಪುಣ್ ನೌಕೆಯನ್ನು ಇಂದು ಮುಂಬೈನ ನೇವಲ್ ಡಾಕ್‌ಯಾರ್ಡ್‌ನಲ್ಲಿ ನಡೆದ ಸಮಾರಂಭದಲ್ಲಿ ಅಧಿಕೃತವಾಗಿ ಸೇವೆಗೆ ಸೇರ್ಪಡೆಗೊಳಿಸಿದೆ. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಪ್ರಸ್ತುತ ಜಾಗತಿಕ ಮತ್ತು ರಾಜತಾಂತ್ರಿಕ ಸವಾಲುಗಳ ನಡುವೆ ಆಳ ಸಮುದ್ರದಲ್ಲಿನ ಬಹುಪಕ್ಷೀಯ ಕಾರ್ಯಾಚರಣೆಗಳಿಗೆ ಅಗತ್ಯವಿರುವ ನೌಕಾಪಡೆಯ ವಿಶೇಷ ನೀರೊಳಗಿನ ಸಾಮರ್ಥ್ಯಕ್ಕೆ ನಿಪುಣ್ ನೌಕೆ ಒಂದು ಶಕ್ತಿಶಾಲಿ ಸೇರ್ಪಡೆಯಾಗಲಿದೆ ಎಂದು ತಿಳಿಸಿದರು. ವಿಶಾಖಪಟ್ಟಣಂನ ಹಿಂದೂಸ್ಥಾನ್ ಶಿಪ್‌ಯಾರ್ಡ್ ಲಿಮಿಟೆಡ್ ಸಂಸ್ಥೆ ಸಂಪೂರ್ಣ ದೇಶೀಯವಾಗಿ ಈ ನೌಕೆಯನ್ನು ವಿನ್ಯಾಸಗೊಳಿಸಿ ನಿರ್ಮಿಸಿದ್ದು, ರಕ್ಷಣಾ ಹಡಗು ನಿರ್ಮಾಣ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆಗೆ ಇದು ಪ್ರಮುಖ ಮೈಲಿಗಲ್ಲಾಗಿದೆ. ಈ ನೌಕೆ ಅತ್ಯಾಧುನಿಕ ನ್ಯಾವಿಗೇಷನ್, ವೇದಿಕೆ ನಿರ್ವಹಣೆ, ನೀರೊಳಗಿನ ತಂತ್ರಜ್ಞಾನ ವ್ಯವಸ್ಥೆ ಮತ್ತು ವಿಶೇಷ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿದ್ದು, ಕಠಿಣ ಸಮುದ್ರ ಪರಿಸರದಲ್ಲಿ ಕಾರ್ಯ ನಿರ್ವಹಿಸುವ ಮುಳುಗು ತಜ್ಞರಿಗೆ ಬೆಂಬಲ ಒದಗಿಸಲಿದೆ.

**<>><><*><><<>**

ಪೆಟ್ರೋಲ್‌ನಲ್ಲಿರುವ ಎಥನಾಲ್‌ನ ನಿಖರ ಪ್ರಮಾಣವನ್ನು ಗ್ರಾಹಕರಿಗೆ ಬಹಿರಂಗಪಡಿಸಬೇಕು ಮತ್ತು ವಾಹನಗಳ ಹೊಂದಾಣಿಕೆ ಕುರಿತು ಹೆಚ್ಚಿನ ಪಾರದರ್ಶಕತೆ ತರಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಪ್ರಸನ್ನ ಬಿ. ಹೊರಾಳೆ ಅವರ ಪೀಠ ಈ ಅರ್ಜಿಯನ್ನು ವಜಾಗೊಳಿಸಿದ್ದು, ಪರಿಹಾರಕ್ಕಾಗಿ ಸಂಬಂಧಪಟ್ಟ ಹೈಕೋರ್ಟ್‌ಗೆ ಮನವಿ ಸಲ್ಲಿಸಲು ಅರ್ಜಿದಾರ ವಕೀಲರಿಗೆ ಸೂಚಿಸಿದೆ. ವಿಚಾರಣೆ ವೇಳೆ ಅರ್ಜಿದಾರರು, ತಾವು ಸರ್ಕಾರದ ಎಥನಾಲ್ ಮಿಶ್ರಣ ನೀತಿಯನ್ನು ಪ್ರಶ್ನಿಸುತ್ತಿಲ್ಲ ಬದಲಿಗೆ ಪೆಟ್ರೋಲ್‌ನಲ್ಲಿ ಬೆರೆಸಲಾದ

ಎಥನಾಲ್ ಪ್ರಮಾಣವನ್ನು ತಿಳಿಯುವ ಹಕ್ಕು ಪ್ರತಿಯೊಬ್ಬರ ನಾಗರಿಕನಿಗೂ ಇದೆ ಎಂದು ಪ್ರತಿಪಾದಿಸಿದರು. ಇದನ್ನು ಆಕ್ಷೇಪಿಸಿದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, ಇದೊಂದು ಪ್ರಾಕ್ಸಿ ಅರ್ಜಿಯಾಗಿದ್ದು, ಕಳೆದ ವರ್ಷವು ಇಂತಹದೇ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತ್ತು ಎಂದು ಸ್ಪಷ್ಟಪಡಿಸಿದರು. ಇ-೨೦ ಪೆಟ್ರೋಲ್ ಬಳಕೆಯಿಂದ ಮಾಲಿನ್ಯ ಕಡಿಮೆಯಾಗಲಿದ್ದು, ಇದು ರೈತರ ಆದಾಯ ಹಾಗೂ ಇಂಧನ ಭದ್ರತೆಗೆ ಸಹಕಾರಿ ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ.

<>><><*><><<>

ಮಾಜಿ ರಾಷ್ಟ್ರಪತಿ ಭಾರತ ರತ್ನ ಪುರಸ್ಕೃತ ಡಾ.ಪ್ರಣವ್ ಮುಖರ್ಜಿ ಅವರ ಪುಣ್ಯ ಸ್ಮರಣೆ ದಿನವಾದ ಇಂದು ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೌರವನಮನ ಸಲ್ಲಿಸಿದ್ದಾರೆ. ಡಾ. ಮುಖರ್ಜಿ, ಓರ್ವ ಉತ್ತಮ ಆಡಳಿತಗಾರ ಹಾಗೂ ವಿದ್ವಾಂಸರಾಗಿದ್ದರು. ತಮ್ಮ ದಶಕಗಳ ಸಾರ್ವಜನಿಕ ಜೀವನದುದ್ದಕ್ಕೂ ಅವರು, ರಾಷ್ಟ್ರದ ಹಾಗೂ ಅದರ ಸಾಂವಿಧಾನಿಕ ಮೌಲ್ಯಗಳ ಪ್ರತಿ, ದೃಢ ಬದ್ಧತೆ ಹೊಂದಿದ್ದರು ಎಂದು ಸಚಿವರು ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಸ್ಮರಿಸಿದ್ದಾರೆ.

<>><><*><><<>

ಭಾರತ ಮತ್ತು ಬ್ರೇಜಿಲ್ ರಾಷ್ಟ್ರಗಳು ಔಷಧೀಯ, ರಾಸಾಯನಿಕ, ಎಂಜಿನಿಯರಿಂಗ್ ಹಾಗೂ ಯಂತ್ರೋಪಕರಣಗಳ ಕ್ಷೇತ್ರಗಳಲ್ಲಿ ಸಹಭಾಗಿತ್ವದ ಮೂಲಕ ೨೦೩೦ರ ವೇಳೆಗೆ ತಮ್ಮ ದ್ವಿಪಕ್ಷೀಯ ವ್ಯಾಪಾರವನ್ನು ೩೦ ಶತಕೋಟಿ ಡಾಲರ್‌ಗೆ ಹೆಚ್ಚಿಸುವ ಗುರಿಯನ್ನು ಪುನರುಚ್ಚರಿಸಿವೆ. ಬ್ರೆಜಿಲ್‌ನಲ್ಲಿ ನಡೆದ ಭಾರತ-ಬ್ರೆಜಿಲ್ ವ್ಯಾಪಾರ ಉಸ್ತುವಾರಿ ವ್ಯವಸ್ಥೆ-ಟಿಎಂಎಂನ ೮ನೇ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಯಿತು. ಭಾರತದ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹಾಗೂ ಬ್ರೆಜಿಲ್‌ನ ವಿದೇಶಿ ವ್ಯಾಪಾರ ಕಾರ್ಯದರ್ಶಿ ಟಟಿಯಾನಾ ಲಾಸೆರ್ಡಾ ಪ್ರೆಝುರೆಸ್ ಈ ಸಭೆಯ ಸಹ-ಅಧ್ಯಕ್ಷತೆ ವಹಿಸಿದ್ದರು. ೨೦೨೫-೨೬ರ ಸಾಲಿನಲ್ಲಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು ೧೫.೦೭ ಶತಕೋಟಿ ಡಾಲರ್ ತಲುಪಿದೆ. ಸಭೆಯಲ್ಲಿ ಭಾರತ-ಮರ್ಕೋಸುರ್ ವ್ಯಾಪಾರ ಒಪ್ಪಂದದ ವಿಸ್ತರಣೆ ಮತ್ತು ಎರಡೂ ದೇಶಗಳ ಔಷಧೀಯ ಹಾಗೂ ಕೃಷಿ ಉತ್ಪನ್ನಗಳಿಗೆ ಪರಸ್ಪರ ಮಾರುಕಟ್ಟೆ ಅವಕಾಶ ಕಲ್ಪಿಸುವ ಕುರಿತು ಸಮಾಲೋಚನೆ ನಡೆಸಲಾಯಿತು. ಬ್ರಿಕ್ಸ್, ಜಿ-೨೦ ಮತ್ತು ವಿಶ್ವವ್ಯಾಪಾರ ಸಂಸ್ಥೆಯ ವೇದಿಕೆಗಳಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸಲು ಸಮ್ಮತಿಸಿದ ಎರಡೂ ದೇಶಗಳು, ನವದೆಹಲಿಯಲ್ಲಿ ಬ್ರೆಜಿಲ್‌ನ 'ಅಪೆಕ್ಸ್‌ಬ್ರೆಜಿಲ್' ಕಚೇರಿ ಸ್ಥಾಪಿಸಿರುವುದನ್ನು ಸ್ವಾಗತಿಸಿದವು. ಸಭೆಯ ಭಾಗವಾಗಿ ನಡೆದ ಉದ್ಯಮಿಗಳ ಸಮಾವೇಶದಲ್ಲಿ ಕಿರ್ಲೋಸ್ಕರ್, ಯುಪಿಎಲ್ ಮತ್ತು ಆದಿತ್ಯ ಬಿರ್ಲಾ ಗ್ರೂಪ್ ಸೇರಿದಂತೆ ೨೫ಕ್ಕೂ ಹೆಚ್ಚು ಪ್ರಮುಖ ಭಾರತೀಯ ಕಂಪೆನಿಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

<>><><*><><<>

ಪವಿತ್ರ ಶ್ರಾವಣ ಮತ್ತು ಭಾದ್ರಪದ ಮಾಸಗಳ ಅಂಗವಾಗಿ, ಭಗವಾನ್ ಮಹಾಕಾಲೇಶ್ವರನ ೫ನೇ ಮೆರವಣಿಗೆ ಮಹಾಕಾಲ್ ಸವಾರಿ ಉಜ್ಜಯಿನಿಯಲ್ಲಿ ಇಂದು ನಡೆಯಲಿದೆ. ಈ ಬಾರಿಯ ಮೆರವಣಿಗೆಯಲ್ಲಿ ಭಕ್ತಾದಿಗಳು ಭಗವಂತನನ್ನು ಐದು ವಿಭಿನ್ನ ರೂಪಗಳಲ್ಲಿ ಕಣ್ಣುಂಬಿಕೊಳ್ಳಬಹುದಾಗಿದೆ. ಈ ಬಾರಿ ಸವಾರಿಯ ಪ್ರಮುಖ ಆಕರ್ಷಣೆಯಾಗಿ ಉಜ್ಜಯಿನಿಯ ಪ್ರಾಚೀನ '೮೪ ಮಹಾದೇವ'ರ ಪರಿಕಲ್ಪನೆಯನ್ನು ಪ್ರಧಾನ ವಿಷಯವಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದು, ಇದಕ್ಕೆ ಸಂಬಂಧಿಸಿದ ವರ್ಣರಂಜಿತ ಸ್ತಬ್ಧಚಿತ್ರಗಳು ನಗರ ಪ್ರದಕ್ಷಿಣೆಗೆ ಮತ್ತಷ್ಟು ಮೆರುಗು ನೀಡಲಿವೆ. ಮಹಾಕಾಲೇಶ್ವರ ದೇವಾಲಯದ ಸಭಾ ಮಂಟಪದಲ್ಲಿ ಧಾರ್ಮಿಕ ಪೂಜಾವಿಧಿಗಳು ಮುಕ್ತಾಯಗೊಂಡ ನಂತರ, ಸಂಜೆ ೪ ಗಂಟೆಗೆ ಮೆರವಣಿಗೆಯು ದೇವಾಲಯದ ಆವರಣದಿಂದ ಅಧಿಕೃತವಾಗಿ ಹೊರಡಲಿದೆ.

<>><><*><><<>

ಜಾರ್ಖಂಡ್‌ನ ಪ್ರಮುಖ ನೇಮಕಾತಿ ಪರೀಕ್ಷೆಗಳಾದ ಜೆಪಿಎಸ್‌ಸಿ ಮತ್ತು ಜೆಎಸ್‌ಎಸ್‌ಸಿ ಪರೀಕ್ಷಾ ಅಕ್ರಮದ ತನಿಖೆ ನಡೆಸುತ್ತಿರುವ ಅಪರಾಧ ತನಿಖಾ ಇಲಾಖೆ-ಸಿಐಡಿ ಹಲವು ಪ್ರಮುಖ ಅಂಶಗಳನ್ನು ಬಯಲಿಗೆಳೆದಿದೆ. ಪರೀಕ್ಷಾ ಹೊರಗುತ್ತಿಗೆ ಸಂಸ್ಥೆಗಳು ಮತ್ತು ಮಧ್ಯವರ್ತಿಗಳ ಜಾಲ ಸಾಫ್ಟ್‌ವೇರ್ ಮೂಲಕ ಫಲಿತಾಂಶ ತಿದ್ದುಪಡಿ ಮಾಡುವುದರಿಂದ ಹಿಡಿದು ಅತ್ಯಂತ ಭದ್ರತೆಯ ಸ್ಟ್ರಾಂಗ್ ರೂಮ್‌ಗಳಿಂದ ಉತ್ತರ ಪತ್ರಿಕೆಗಳನ್ನು ಹೊರತಂದು ಹೊಟೇಲ್ ಮತ್ತು ಬಾಡಿಗೆ ಕೊಠಡಿಗಳಲ್ಲಿ ತಜ್ಞರಿಂದ ಬರೆಸಿ ಮರಳಿ ಸ್ಟ್ರಾಂಗ್ ರೂಮ್‌ಗೆ ಇಡುವವರೆಗಿನ ಬೃಹತ್ ಹಗರಣವನ್ನು ಸಿಐಡಿ ವಿಶೇಷ ತನಿಖಾ ತಂಡ ಪತ್ತೆ ಹಚ್ಚಿದೆ. ಪತ್ತೆಯಾಗಿರುವ ಆನ್‌ಲೈನ್ ಪೋರ್ಟಲ್ ವ್ಯವಸ್ಥೆ, ತಾಂತ್ರಿಕ ಸಾಕ್ಷ್ಯಾಧಾರಗಳು, ಸರ್ವರ್ ಲಾಗ್ ಮತ್ತು ಹಣಕಾಸು ವಹಿವಾಟು ಆಧಾರಗಳ ಮೇಲೆ ತನಿಖೆಯನ್ನು ತೀವ್ರಗೊಳಿಸಲಾಗಿದೆ.

<>><><*><><<>

ಹಾರ್ಮುಜ್ ಜಲಸಂಧಿಯಲ್ಲಿರುವ ಇರಾನ್‌ನ ಲಾರಾಕ್ ದ್ವೀಪದಲ್ಲಿನ ಮಿಲಿಟರಿ ನೆಲೆಗಳ ಮೇಲೆ ಅಮೆರಿಕ ಪಡೆಗಳು ನಿನ್ನೆ ರಾತ್ರಿ ಭೀಕರ ವೈಮಾನಿಕ ದಾಳಿ ನಡೆಸಿವೆ. ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್-ಐಆರ್‌ಜಿಸಿ ಪಡೆಗಳು ಹಾರ್ಮುಜ್ ಜಲಸಂಧಿಗೆ

ಸಮುದ್ರದಲ್ಲಿ ಸ್ಫೋಟಕಗಳನ್ನು ಹೊತ್ತೊಯ್ಯುವ ರಾಕೆಟ್‌ಗಳ ಉಡಾವಣೆ ಮಾಡಲು ಸಿದ್ಧತೆ ನಡೆಸುತ್ತಿರುವುದನ್ನು ಗಮನಿಸಿದ ಅಮೆರಿಕ ಸೇನೆ ಲಾರಾಕ್ ದ್ವೀಪದಲ್ಲಿದ್ದ ಎರಡು ಇರಾನ್ ಲಾಂಚರ್‌ಗಳನ್ನು ಗುರಿಯಾಗಿಸಿ ಈ ದಾಳಿ ನಡೆಸಿದೆ. ಅಮೆರಿಕ ನಡೆಸಿದ ಈ ದಾಳಿಯಲ್ಲಿ ಹಲವಾರು ಇರಾನ್ ಮಿಲಿಟರಿ ಸಿಬ್ಬಂದಿ ಹಾಗೂ ನಾಗರಿಕರು ಮೃತಪಟ್ಟಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಎಂದು ಇರಾನ್‌ನ ಸರ್ಕಾರಿ ಪ್ರಸಾರಕ ಐಆರ್‌ಐಬಿ ವರದಿ ಮಾಡಿದೆ. ಅಮೆರಿಕದ ಈ ವಾಯುದಾಳಿಗೆ ಇರಾನ್ ತಕ್ಷಣವೇ ಪ್ರತ್ಯುತ್ತರ ನೀಡಿದ್ದು, ಜೋರ್ಡಾನ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ಐಆರ್‌ಜಿಸಿ ಪಡೆಗಳು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾಯಿಸಿವೆ. ಈ ಕ್ಷಿಪಣಿ ದಾಳಿಯು ಜೋರ್ಡಾನ್‌ನಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ತಲುಪಿದ್ದು, ಈ ಮೂಲಕ ಉಭಯ ದೇಶಗಳ ನಡುವಿನ ಸೇನಾ ಸಂಘರ್ಷವು ಮತ್ತಷ್ಟು ಭೀಕರ ಸ್ವರೂಪಕ್ಕೆ ತಿರುಗಿದೆ.

<><><*><><<>

ಯುಎಸ್-ಓಪನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಟೂರ್ನಿಯಲ್ಲಿ ತಮ್ಮ ೨೫ನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ನ್ಯೂಯಾರ್ಕ್‌ನ ಆರ್ಥರ್ ಆಶ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅರ್ಜೆಂಟಿನಾದ ಮರಿಯಾನೊ ನವೊನ್ ವಿರುದ್ಧ ಆಘಾತಕಾರಿ ಸೊಲನುಭವಿಸಿ ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಪಂದ್ಯದಲ್ಲಿ ಮರಿಯಾನೊ ೭-೬, ೫-೭, ೪-೬, ೬-೨, ೬-೧ ಸೆಟ್‌ಗಳ ಅಂತರದಲ್ಲಿ ಜೊಕೊವಿಚ್ ಅವರನ್ನು ಪರಾಭವಗೊಳಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಕೂಡ ಹಿರಿಯ ಟೆನಿಸ್ ಆಟಗಾರ್ತಿ ಅಮೆರಿಕದ ವೀನಸ್ ವಿಲಿಯಮ್ಸ್, ತಮ್ಮದೇ ದೇಶದವರಾದ ಸೋಫಿಯಾ ಕೆನಿನ್ ವಿರುದ್ಧ ಪರಾಭವಗೊಂಡಿದ್ದಾರೆ.

<><><*><><<>

ದುಬೈನಲ್ಲಿ ಇಂದು ನಡೆಯಲಿರುವ ಮಹಿಳಾ ಟಿ-೨೦ ಏಷ್ಯಾಕಪ್ ಕ್ರಿಕೆಟ್ ಪಂದ್ಯಾವಳಿಯ ಬಿ ಗುಂಪಿನ ಪಂದ್ಯದಲ್ಲಿಂದು ಬಾಂಗ್ಲಾದೇಶ ಮತ್ತು ಇಂಡೋನೇಷ್ಯಾ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

**<><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**